ನರ್ಮದೆಯ ಕಣ್ಣೀರು ಬತ್ತುತ್ತಲೇ ಇಲ್ಲ. ಯಾವಾಗ ಮನೆಯ ಸಾಮಾನುಗಳನ್ನೆಲ್ಲಾ ಒಗ್ಗೂಡಿಸಿ ಕಟ್ಟಿಡುವುದು ಆರಂಭವಾಯ್ತೋ ಆಗಿನಿಂದ ಶುರುವಾಗಿದೆ ಕಣ್ಣೀರು, ಬಿಸುಸುಯ್ಲು.

"ಹೋಗ್ಲೇಬೇಕಾ? ಬೇರೆ ದಾರಿ ಇಲ್ವಾ? ಯೋಚ್ನೆ ಮಾಡಿ..." ಕೇಳಿದ್ದಳು ರಾಜೀವನ ಹತ್ತಿರ.

"ಏನಿದೆ ದಾರಿ? ಸದ್ಯಕ್ಕಂತೂ ನನ್ನ ತಲೆ ಕೆಲಸ ಮಾಡ್ತಿಲ್ಲ..." ಉತ್ತರಿಸಿದ್ದ ರಾಜೀವ.

"ಯಾಕ್ರೀ ಹೀಗಾಯ್ತು? ನಮ್ಮಷ್ಟಕ್ಕೆ ನಾವು ಹೇಗೋ ಬದುಕು ಮಾಡ್ಕೊಂಡಿದ್ವಿ. ದೇವ್ರಿಗೆ ಕಣ್ಣಿಲ್ವಾ?"

"ನಿಂಗೊಬ್ಳಿಗೇ ಕಷ್ಟ ಬಂದಿರೋದೇನೇ? ಇಡೀ ಪ್ರಪಂಚಕ್ಕೇ ಬಂದಿದೆ. ನಮಗೆ ಒಂದು ಊರು, ಒಂದು ಮನೆ ಅಂತಾದ್ರೂ ಇದೆ. ಅದೂ ಇಲ್ದಿರೋರು ಲಕ್ಷಗಟ್ಲೆ ಇದಾರೆ..."

"ಹೆದ್ರಿಕೆಯಾಗುತ್ತೆ ನಂಗೆ..."

"ಹೆದರಿಕೊಂಡ್ರೆ ಏನಾಗುತ್ತೆ? ಏನೂ ಆಗಲ್ಲ."

ಮನೆಯ ಕೀಲಿಕೈಯನ್ನು ಶಾಶ್ವತವಾಗಿ ಮನೆಯೊಡೆಯನ ಕೈಗೆ ರವಾನಿಸಿ, ಕಟ್ಟಿದ ಗಂಟುಮೂಟೆಗಳನ್ನು ವ್ಯಾನಿನಲ್ಲಿ ತುಂಬುವಾಗ ಆ ಮನೆಯವರಿಂದ ಸೌಜನ್ಯಕ್ಕಾದರೂ ಒಂದು ಕರೆ ಬರಬಹುದೆಂಬ ನಿರೀಕ್ಷೆ ನರ್ಮದನಿಗಿತ್ತು. 'ಬನ್ನಿ, ಕುಂಕುಮ ಇಟ್ಕೊಂಡ್ಹೋಗಿ.'

ಇಲ್ಲ, ಮುಚ್ಚಿಕೊಂಡಿದ್ದ ಕಿಟಕಿಯೂ ತೆರೆಯಲಿಲ್ಲ. ಐದು ವರ್ಷಗಳಿಂದ ಇಟ್ಟುಕೊಂಡಿದ್ದ ಹೊಕ್ಕುಬಳಕೆಗೆ ಯಾವ ಅರ್ಥವೂ ಇಲ್ಲವೆಂಬಂತೆ ನಿರುದ್ವಿಗ್ನ ಬೀಳ್ಕೊಡುಗೆ.

ನಾಲ್ಕರ ಪೋರ ಸಮೀರ ಅಪರೂಪಕ್ಕೆ ಹೊರಗೆ ಹೊರಟ ಖುಷಿಯಲ್ಲಿ ಕುಣಿದಾಡುತ್ತಿದ್ದ. ಅಪ್ಪನ ಜೊತೆ ಮುಂದಿನ ಸೀಟಿನಲ್ಲಿ ಕೂರುತ್ತೇನೆಂದು ಹಟ ಮಾಡಿದವನನ್ನು ಬಲವಂತದಿಂದ ಹಿಂದಿನ ಸೀಟಿನಲ್ಲಿ ತನ್ನ ಪಕ್ಕ ಕೂರಿಸಿಕೊಂಡಳು ನರ್ಮದಾ. ಗಂಡ ಸದಾ ವ್ಯಗ್ರ ಮನಃಸ್ಥಿತಿಯಲ್ಲಿರುತ್ತಾನೆ ಎಂದು ಅವಳಿಗೆ ಗೊತ್ತಿದೆ. ಇವತ್ತಿನ ಪ್ರಯಾಣ ಒಂದರ್ಥದಲ್ಲಿ ಅವರ ಬದುಕಿನ ಸೋಲು. ಮುಂದೆ ಏನಾಗುತ್ತದೆ ಎನ್ನುವುದು ವಿಧಿಗೆ ಬಿಟ್ಟಿದ್ದು. ಊರಿಗೆ ಹೊರಟು ಬರುತ್ತೇವೆಂದು ತಿಳಿಸಿದಾಗ ಆ ಕಡೆಯಿಂದ ಬಂದ ರಾಜೀವನ ಅಣ್ಣನ ಪ್ರತಿಕ್ರಿಯೆ ಪ್ರೋತ್ಸಾಹ ಕೊಡುವಂತಹದ್ದಾಗಿರಲಿಲ್ಲ.

"ಮಾರಾಯಾ, ಒಂದು ಮಾತು ಹೇಳ್ತೀನಿ, ತಪ್ಪು ತಿಳ್ಕಂಬೇಡ..." ರಾಗ ಎಳೆದಿದ್ದನಂತೆ ಅಣ್ಣ.

"ಹೇಳು..."

"ಅಲ್ಲಿಂದ ಕಾಯಿಲೆ ತಂದು ಇಲ್ಲಿ ಬಿತ್ತಿದ್ರೆ ಜನ ಬಿಟ್ಬಿಡ್ತಾರಾ? 'ಏನೋ ಇಷ್ಟು ದಿನ ಹಳ್ಳೀಲಿ ತಣ್ಣಗಿದೀವಿ, ಅದಕ್ಕೂ ಕಡ್ಡಿ ಹೆಟ್ಬೇಡಿ' ಅಂತಾರೆ. ಮೊದಲೇ ಹೇಳಿದೀನಿ..."

"ನಮಗೆ ಯಾವ ಕಾಯಿಲೇನೂ ಬಂದಿಲ್ಲ ಅಣ್ಣಾ. ದೇವರ ದಯೆಯಿಂದ ಇಷ್ಟರವರೆಗೆ ಆರಾಮಾಗೇ ಇದೀವಿ..."

"ಅದನ್ನ ನೀನು ಹೇಳಿದ್ರೆ ಸಾಕಾ? ಸರ್ಟಿಫಿಕೇಟ್ ಕೇಳ್ತಾರೆ ಜನ..."

"ಅದಕ್ಕೆಲ್ಲಿ ಹೋಗೋದು? ಇದೊಳ್ಳೇ ಕತೆ ಆಯ್ತು. ನಮ್ಮೂರಿಗೆ ನಮಗೆ ಬರೋಕೂ ಆಗಲ್ಲ ಅಂದ್ರೆ ಇನ್ನೆಲ್ಲಿಗೆ ಹೋಗ್ಬೇಕು? ಮನೆಬಾಡಿಗೆ ಕೊಡೋಕೂ ಕೈಲಿ ದಮ್ಮಡಿ ಇಲ್ಲ. ಇಲ್ಲೇ ಇದ್ರೆ ಬೀದಿಗೆ ಬೀಳ್ತೀವಿ, ಅಷ್ಟೇ.."

"..."

"ಮತ್ತೆ ಲಾಕ್‌ಡೌನ್ ಶುರುವಾಗುತ್ತಂತೆ. ಅಷ್ಟರಲ್ಲಿ ಹೊರಟುಬಿಡ್ತೀವಿ. ಊರಿಂದ ಊರಿಗೆ ಹೋಗೋದನ್ನ ಬಂದ್ ಮಾಡಿದ್ರು ಅಂದ್ರೆ ಮತ್ತೆ ಇಲ್ಲೇ ಸಿಕ್ಕಿಕೊಳ್ತೀವಿ..."

ಹೀಗೊಂದು ಮಾತುಕತೆಯಾದ ನಂತರ ರಾಜೀವ ಖಿನ್ನನಾಗತೊಡಗಿದ್ದು ನರ್ಮದನ ಗಮನಕ್ಕೆ ಬಂದಿದೆ. ಆದರೆ, ವಿಧಿ ಇಲ್ಲ. 'ಇವತ್ತು ಸರಿಯಾದೀತು, ನಾಳೆ ಸರಿಯಾದೀತು' ಎನ್ನುವ ಆಶಾವಾದಕ್ಕೆ